ಅಷ್ಟೇ ಸಂಖ್ಯೆಯಲ್ಲಿ ಹಾಡಿರುತ್ತಾರೆ. ಲಕ್ಷ್ಮೀಶನೂ ಅಂಥದೊಂದು ವೈರುಧ್ಯ ಸಂಗತಿಯನ್ನು ಹೇಳುತ್ತ ರಾಮನ ಆಜ್ಞೆಯನ್ನು ಪರಿಪಾಲಿಸುವ ಸೀತೆಯ ಎದುರು ಚಂಡಿಯನ್ನು ನಿಲ್ಲಿಸುತ್ತಾನೆ.

★★★

ಲಕ್ಷ್ಮೀಶನ ಜೈಮಿನಿ ಭಾರತವೆಂದರೆ 18, 19, 20, 21ನೆಯ ಸಂಧಿಯ ಸೀತಾ ಪರಿತ್ಯಾಗದ ಕಥೆ ಎಂಬಂತಾಗಿಬಿಟ್ಟಿದೆ. ಹಾಗೆ ನೋಡಿದರೆ ಇದು ಜೈಮಿನಿ ಭಾರತದಲ್ಲಿ ಆನುಷಂಗಿಕವಾಗಿ ಸೇರ್ಪಡೆಯಾಗಿರುವ ಕಥೆ. ಬಭ್ರುವಾಹನ ಮತ್ತು ಇವನ ತಂದೆ ಅರ್ಜುನ ಇವರ ಯುದ್ಧ ನಡೆಯುವಾಗ, ಈ ಹೋರಾಟ ನೋಡಿದರೆ ತ್ರೇತಾಯುಗದಲ್ಲಿ ಮಕ್ಕಳಾದ ಲವ–ಕುಶರಿಗೂ ರಾಮನಿಗೂ ನಡೆದ ಯುದ್ಧದಂತಿದೆ ಎಂದು ಜೈಮಿನಿ ಮಹರ್ಷಿಗಳು ಜನಮೇಜಯನಿಗೆ ಹೇಳುವ ಉಪಕಥೆ ಇದು. ಆಶ್ಚರ್ಯವೆಂದರೆ ಒಂದು ಕಾವ್ಯ ಪುರಾಣ ಸಂಗತಿ ಇನ್ನೊಂದು ಕಥಾ ನಿರೂಪಣೆಯಲ್ಲಿ ಅದೆಷ್ಟು ಚೆನ್ನಾಗಿ ಬಂದು ಸೇರಿಕೊಳ್ಳುತ್ತವೆಂದರೆ; ಈ ಮಾದರಿಗಳ ಅಧ್ಯಯನ ಶಿಷ್ಟ ಪರಂಪರೆ ಅಥವಾ ಜನಪದದಲ್ಲಾಗಲಿ ನಡೆದಂತೆ ತೋರುವುದಿಲ್ಲ.

ಅಭಿಮನ್ಯುವಿನ ಮಹಾಭಾರತದ ಚಕ್ರವ್ಯೂಹ ಭೇದನ ಕಥೆ ಜನಪದದಲ್ಲಿ ಪ್ರೇಮಕಥನವಾಗಿ ಸೇರಿಕೊಳ್ಳುತ್ತದೆ. ಶೂನ್ಯಸಂಪಾದನೆಯ ಕಥನ ಪ್ರಸಂಗ ಮಂಟೇಸ್ವಾಮಿ ಜನಪದ ಕಾವ್ಯದಲ್ಲಿ ವಿಸ್ತೃತ ಸಂಭಾಷಣೆಯ ನಾಟಕ ಕಥೆಯಾಗಿ ಸೇರಿಕೊಳ್ಳುತ್ತದೆ. ಮಲೆಯ ಮಹದೇಶ್ವರ ಮಹಾಕಾವ್ಯದ ಶ್ರವಣ ದೊರೆಯ ಸಂಹಾರದ ಸಾಲು, ರಾಮಾಯಣದ ಉತ್ತರಕಾಂಡದ ರಾವಣನ ಕಥೆಯನ್ನು ನೆನಪಿಸುತ್ತದೆ. ಹೀಗೆ ಒಂದು ಪ್ರಾಚೀನ ಕಥೆ ಅದರ ಮುಂದಿನ ಕಾಲದ ಕಾವ್ಯ ಪ್ರಸಂಗದಲ್ಲಿ ಅಂಥದೇನೂ ಸಮಸ್ಯೆಯನ್ನು ತಂದೊಡ್ಡದೆ ನಯವಾಗಿ ಸೇರಿಕೊಂಡು ಮುಖ್ಯಕಥೆಯನ್ನು ಸಮರ್ಥಿಸುತ್ತದೆ. ಅಂದರೆ ರಾಮಾಯಣದ ಮಹಾಸಮರ್ಥ ಪಾತ್ರವೆನಿಸುವ ಹನುಮಂತನು ಕುರುಕ್ಷೇತ್ರ ಯುದ್ಧದಲ್ಲಿ ಅರ್ಜುನನ ರಥದ ಬಾವುಟದಲ್ಲಿ ನೆಲೆಸಿದಂತೆ!

ಲಕ್ಷ್ಮೀಶನ ಜೈಮಿನಿ ಭಾರತದಲ್ಲಿ ಆನುಷಂಗಿಕವಾಗಿ, ಅಕಸ್ಮಾತ್ತಾಗಿ ಸೇರಿಕೊಂಡಿರುವ ಸೀತಾ ಪರಿತ್ಯಾಗದ ಕಥೆ ಕೃತಿಯ ಎಲ್ಲ ಕಥೆಗಳಿಗಿಂತ ಉತ್ಕೃಷ್ಟ ಭಾಗವಾಗಿಬಿಟ್ಟಿದೆ. ಈ ಭಾಗದಲ್ಲಿ ಸೀತೆಯು ರಾಮನ ಬಗ್ಗೆ ಯಾವ ಭಾವವನ್ನು ತಳೆದು ಮಾತನಾಡುತ್ತಾಳೆ ಎಂಬ ವಿವರಗಳು ತುಂಬ ಸೂಕ್ಷ್ಮವಾಗಿವೆ. ಕರುಣೆಯಿಲ್ಲದ ರಾಮನ ಬಗ್ಗೆ ಸೀತೆ ತೋರುವ ಘನ ಕಾರುಣ್ಯ ಅದು ವ್ಯಂಗ್ಯವೋ, ಅನುಭವಿಸಲಾಗದ ಅಸಮಾಧಾನದ ಉರಿಯ ನುಡಿಯೋ ಗೊತ್ತಾಗದಂತಿದೆ. ಲಕ್ಷ್ಮೀಶ ಮೊದಲೇ ಶ್ಲೇಷಾಲಂಕಾರ ಪರಿಣತನಿರುವಂತೆ, ಇಲ್ಲಿ ಭಾವಶ್ಲೇಷ ತುಂಬಿಯೇ ಕಥನ ಭಾಗವನ್ನು ಸೃಷ್ಟಿಸಿರುವಂತಿದೆ. ಸೀತೆಯನ್ನು ಅರಣ್ಯದಲ್ಲಿ ಬಿಟ್ಟು, ಅಲ್ಲಿಂದ ತೆರಳಲಾಗದೆ, ಲಕ್ಷ್ಮಣನು ದ್ವಂದ್ವಭಾವದಲ್ಲಿ ನಿಂತಿರಲು ಸೀತೆ ಹೇಳುವ ಮಾತು ಹೀಗಿದೆ–

ಏಕೆ ನಿಂದಿಹೆ ಪೋಗು ಸೌಮಿತ್ರಿ ಕೋಪಿಸನೆ
ಕಾಕುತ್ಥ್ಸನಿಲ್ಲಿ ತಳುವಿದೊಡೆ ನೆರವುಂಟು ತನ
ಗೀಕಾಡೊಳುಗ್ರಜಂತುಗಳಲ್ಲಿ ರಘುನಾಥನೇಕಾಕಿಯಾಗಿರ್ಪನು।
ಲೋಕದರಸರೇಗೈದೊಡಂ ತನ್ನ ಕಿಂಕರ
ರ್ಬೇಕು ಬೇಡೆಂದು ಪೇಳದೆ ಭರತ ಶತ್ರುಘ್ನ
ರೀ ಕೆಲಸಕೊಪ್ಪಿದರೆ ಹನುಮಂತನಿರ್ದಪನೆ ಪೇಳೆಂದಳಲ್ದಳಬಲೆ॥

ಉದ್ದಾಲಕನ ಎದುರು ಚಂಡಿ ನೀನೇನು ಹೇಳುತ್ತೀಯೋ ಅದನ್ನು ನಾನು ಮಾಡುವವಳಲ್ಲ